

ಶೃಂಗಾರ ಚೇಷ್ಟೆಗಳು ಮೋಹಿನಿಯಲ್ಲಿ ಇರಲಿಲ್ಲ. ಓರೆನೋಟ, ರೂಪದ ಅಹಂ, ಮಾದಕತೆ ತುಂಬಿದ ಕಣ್ಣುಗಳು, ಮನಸ್ಸನ್ನು ತನ್ನತ್ತ ಸೆಳೆಯುವ ಮುಗುಳ್ನಗೆ, ಚಂಚಲವಾಣಿ ಇವಾವುವೂ ಅಲ್ಲಿ ಇರಲೇ ಇಲ್ಲ. ಆದರೆ ಚಂದ್ರನ ಮೋಹಕ ಬೆಳ್ದಿಂಗಳ ನಡುನಡುವೆ ಕಚಗುಳಿ ಇಡುವ ತುಂತುರು ಹನಿಗಳು ಉದುರುವ ಹಾಗೆಯೇ ಆ ನಿಶ್ಚಲ ಪ್ರೇಮದಲ್ಲಿ ಆಕೆಯ ಮುಖದ ಮೇಲೆ ಮುಗುಳ್ನಗೆ ಮಿಂಚಿ ಕಣ್ಣುಗಳು ಆದ್ರವಾಗಿಬಿಡುತ್ತಿದ್ದವು. ಇದು ಶೃಂಗಾರಚೇಷ್ಟೆ ಆಗಿರಲಿಲ್ಲ. ಬದಲಾಗಿ ನನ್ನ ಹೃದಯದಲ್ಲಿ ಪ್ರೀತಿಯ ಅಲೆಗಳನ್ನು ಸೃಷ್ಟಿಸುವ ನೈಜ ಭಾವಪೂರ್ಣ ಚಿತ್ರವಾಗಿತ್ತು.

2

ಸಂಜೆಯ ಹೊತ್ತು. ಹಗಲು ಮತ್ತು ರಾತ್ರಿ ಆಲಂಗಿಸಿಕೊಳ್ಳುತ್ತಿದ್ದವು. ಆಗಸದಲ್ಲಿ ಮೋಡಗಳು ದಟ್ಟೈಸಿದ್ದವು. ನಾನು ಅದೇ ನೀರಿನ ಕೊಳದ ದಂಡೆಯ ಮೇಲೆ ಮೋಹಿನಿಯ ಜೊತೆ ಕುಳಿತಿದ್ದೆ. ತಣ್ಣನೆಯ ಗಾಳಿ, ಮೇಲೆ ಆಗಸದಲ್ಲಿ ಮತ್ತೇರಿದಂತಹ ಮೋಡಗಳು ಹೃದಯದ ಯಾವುದೋ ಮೂಲೆಯಲ್ಲಿ ಸುಪ್ತವಾಗಿರುವ ಪ್ರೇಮಭಾವವನ್ನು ಜಾಗೃತಗೊಳಿಸಿಬಿಡುತ್ತವೆ. ಆ ಹುಚ್ಚುತನ ಆ ಹೊತ್ತಿನಲ್ಲಿ ನಮ್ಮಿಬ್ಬರ ಹೃದಯವನ್ನು ಆವರಿಸಿಬಿಟ್ಟಿತ್ತು. ಆಗ ನಮ್ಮ ತಾಳ್ಮೆ ಕಳೆದುಕೊಂಡ ಪ್ರೀತಿಯ ಉನ್ಮಾದದ ಕಣ್ಣುಗಳಲ್ಲಿ ಪ್ರತ್ಯಕ್ಷವಾಗಿಬಿಡುತ್ತೇನೋ ಅನ್ನಿಸುತ್ತಿತ್ತು. ಇಂದು ಮೋಹಿನಿಯ ವಾಣಿಯೂ ಸಂಯಮದ ಬೇಡಿಯಿಂದ ಮುಕ್ತವಾಗಿಬಿಟ್ಟಿತ್ತು. ಆಕೆಯ ಪ್ರೀತಿಯಿಂದ ಮಿಂದೆದ್ದ ಮಾತುಗಳು ನನ್ನ ಆತ್ಮವನ್ನು ಸಕ್ರಿಯಗೊಳಿಸಿಬಿಟ್ಟಿದ್ದವು.

ಇದ್ದಕ್ಕಿದ್ದ ಹಾಗೆ ಮೋಹಿನಿ ಬೆಚ್ಚಿಬಿದ್ದು ಗಂಗೆಯ ಕಡೆಗೆ ನೋಡಿದಳು. ನಮ್ಮಿಬ್ಬರ ಹೃದಯದಲ್ಲಿ ಪ್ರೀತಿ ಉಕ್ಕೇರುತ್ತಿದ್ದ ಹಾಗೆಯೇ ಗಂಗೆಯೂ ಉಕ್ಕಿ ಬರುತ್ತಿದ್ದಳು.

ನೀರಿನ ಅಲೆಗಳ ಏರಿಳಿತಗಳ ನಡುವೆ ಒಂದು ದೀಪ ತೇಲುತ್ತ ಮುಳುಗುತ್ತ ಪ್ರವಾಹದ ಮಧ್ಯೆ ಹೊಯ್ದಾಡುತ್ತ ಮುಂದೆ ಬರುತ್ತಿತ್ತು. ನಡುಗುತ್ತ ನರ್ತಿಸುತ್ತಿದ್ದ ಅದರ ಬೆಳಕು ಧೂಮಕೇತುವಿನ ಹಾಗೆ ನೀರಿನ ಮೇಲೆ ಹರಡಿತ್ತು. ಆಹ್...! ಆ ಪುಟ್ಟ ಬೆಳಕಿನಜೀವಿಯ ವಿಶೇಷತೆಯೇ ಭಿನ್ನವಾಗಿತ್ತು. ಕಾಗದದ ಕೆಲವು ಚೂರು, ಬಿದಿರಿನ ಕೆಲವು ಕಡ್ಡಿಗಳ ನಡುವೆ ಮಣ್ಣಿನ ಒಂದು ದೀಪ... ಯಾರದೋ ಅತೃಪ್ತ ಆಸೆಗಳ ಸಮಾಧಿಯಂತಿದ್ದ ಅದಕ್ಕೆ ಯಾರೋ ತನ್ನ ದುಃಖವನ್ನು ಹಂಚಲೋಸುಗ ಜ್ಯೋತಿಯನ್ನು ಹಚ್ಚಿಬಿಟ್ಟಿದ್ದಾನೆ ಎನ್ನುವಂತಿತ್ತು ಆ ದೃಶ್ಯ. ಆದರೆ ಮುಗ್ಧ ಆ ಎಳೆಯ ದೀಪಜೀವಿಯ ಅಸ್ತಿತ್ವಕ್ಕೆ ಯಾವ ನಿಶ್ಚಿತ ಗುರಿಯೂ ಇರಲಿಲ್ಲ. ಅದು ನದಿಯಲ್ಲಿ ಉಕ್ಕೇರುತ್ತಿದ್ದ ಅಲೆಗಳೊಂದಿಗೆ ಹೊಯ್ದಾಡುತ್ತ ಸುಳಿಯಲ್ಲಿ ಸಿಲುಕಿ ಗೋತಾ ಹೊಡೆಯುತ್ತ ಅಬ್ಬರಿಸುತ್ತಿದ್ದ ಅಲೆಗಳ ನಡುವೆ ಹೊಸಕಿ ಹೋಗುತ್ತ ತೇಲುತ್ತಾ ಸಾಗಿತ್ತು. ಬಹುಶಃ ಜಲದೇವಿಯರು ಈ ಮುಗ್ಧದೀಪದ ಬಗ್ಗೆ ಅನುಕಂಪ ತೋರಿ ತಮ್ಮ ಸೆರಗಿನೊಳಗೆ ಬಚ್ಚಿಟ್ಟುಕೊಂಡಿದ್ದರು.

ಆ ದೀಪ ಮಿನುಗು ಮಿನುಗುತ್ತ ಮಂದಪ್ರಕಾಶ ಬೀರುತ್ತ ಅಲೆಗಳೊಂದಿಗೆ ತೇಲುತ್ತ ವಾಲುತ್ತ ಸಾಗುತ್ತಿದುದನ್ನು ಮೋಹಿನಿ ತದೇಕಚಿತ್ತಳಾಗಿ ಅದನ್ನೇ ನೋಡುತ್ತ ಮೈಮರೆತಂತಿದ್ದಳು. ಅದು ಕಣ್ಣಿಂದ ಮರೆಯಾದ ಕೂಡಲೆ ಉದ್ವಿಗ್ನಳಾಗಿ ಎದ್ದುನಿಂತು ಹೇಳಿದಳು, 'ನಾನು ನದಿಯ ದಡದಲ್ಲಿ ನಿಂತುಕೊಂಡು ಆ ದೀಪವನ್ನು ನೋಡುತ್ತೇನೆ...'

ಮಿಠಾಯಿ ಮಾರುವವನ ಆಕರ್ಷಕ ಧ್ವನಿ ಕೇಳಿದ ಕೂಡಲೆ ಮಗುವೊಂದು ಮನೆಯ ಹೊರಗೆ ಓಡಿಬರುವ ಹಾಗೆ ಮತ್ತು ಆಸೆಗಣ್ಣಿನಿಂದ ಮಿಠಾಯಿಯವನ ರುಚಿಕರವಾದ ಮಿಠಾಯಿ ತಟ್ಟೆಯನ್ನೇ ನೋಡುತ್ತ ಆತನನ್ನು ಕರೆಯುತ್ತ ಅವನ ಹಿಂದೆಯೇ ಓಡುತ್ತ ಹೋಗುವ ರೀತಿಯಲ್ಲಿ ಮೋಹಿನಿ ಅತ್ಯುತ್ಸಾಹ ಹಾಗೂ ಉತ್ಸುಕತೆಯಿಂದ ನದಿಯ ದಂಡೆಯ ಕಡೆಗೆ ನಡೆಯತೊಡಗಿದಳು.

ಉದ್ಯಾನದಿಂದ ನದಿಯ ಕಿನಾರೆ ತನಕ ಮೆಟ್ಟಿಲುಗಳಿದ್ದವು. ನಾವಿಬ್ಬರೂ ಬಿರಬಿರನೆ ನದಿಯ ಕಿನಾರೆಗೆ ತಲುಪಿದೆವು. ಕೂಡಲೇ ಮೋಹಿನಿ ಖುಷಿಯಿಂದ ಕುಪ್ಪಳಿಸುತ್ತ ಜೋರಾಗಿ ಹೇಳಿದಳು. 'ಅದೋ., ಅಲ್ಲಿ... ಅಲ್ಲಿ... ಅದು ಇನ್ನೂ ಇದೆ... ನೋಡು ಅದು ತೇಲಿಹೋಗುತ್ತಿದೆ...'

ಆ ಹೊತ್ತಿನಲ್ಲಿ ಮುಗ್ಧಮಕ್ಕಳ ಮುಖದಲ್ಲಿ ಮೂಡುವ ಮುಗ್ಧತೆ ಹಾಗೂ ಚಂಚಲತೆ ಮೋಹಿನಿಯ ಮುಖದ ಮೇಲೂ ಮೂಡಿದ್ದನ್ನು ನಾನು ಕಂಡೆ. ಅದನ್ನು ಎಂದೂ ಮರೆಯಲಾರೆ. ಆಗ ನನ್ನ ಮನದಲ್ಲಿ ಮೂಡಿದ ಪ್ರಶ್ನೆ. 'ಆ ದೀಪದ ಬಗ್ಗೆ ಇಷ್ಟೊಂದು ಹಾರ್ದಿಕ ಸಂಬಂಧ, ಇಂತಹ ವಿಹ್ವಲತೆಯಾದರೂ ಏಕೆ ಇವಳಿಗೆ?' ನನ್ನಂತಹ ಕವಿತ್ವಶೂನ್ಯ ವ್ಯಕ್ತಿಗೆ ಇದೊಂದು ಒಗಟಾಗಿಯೇ ಉಳಿಯಿತು.

ನನ್ನ ಹೃದಯದಲ್ಲಿ ಸಂಶಯ ಉದ್ಭವಿಸಿತು. ಕತ್ತಲೆಯರಾತ್ರಿ, ದಟ್ಟೈಸಿರುವ ಮೋಡಗಳು, ಪ್ರವಾಹ ತುಂಬಿದ ನದಿ., ಜೋರಾಗಿ ಬೀಸುವ ಗಾಳಿ... ಇದೆಲ್ಲದರ ನಡುವೆ ಈ ಹೊತ್ತಿನಲ್ಲಿ ಇಲ್ಲಿ ಇನ್ನೂ ಹೆಚ್ಚು ಸಮಯ ಇರುವುದು ಸಮಂಜಸವಲ್ಲ. ಆದರೆ ಮೋಹಿನಿ...! ಆ ಮುಗ್ಧ... ಏನೂ ಅರಿಯದಂತಹ ಮುಖಭಾವದಿಂದ ಆ ದೀಪದ ಕಡೆಗೆ ದೃಷ್ಟಿನೆಟ್ಟು ಅದನ್ನೇ ನೋಡುತ್ತ ಮೌನವಾಗಿ ನಿಂತಿದ್ದಳು. ಅಲ್ಲಿ ತೇಲುತ್ತಾ ಮುಳುಗುತ್ತಾ ಆಯಾಸಗೊಂಡಂತೆ ಕಾಣುತ್ತಿದ್ದ ಆ ದೀಪ ನಿಧಾನವಾಗಿ ಹೊಯ್ದಾಡುತ್ತಾ ಅದಾವ ದೇಶದ ಕಡೆಗೆ ತೆರಳುತ್ತಿತ್ತೋ...!

ಆದರೆ ಕೆಲವೇ ಕ್ಷಣಗಳಲ್ಲಿ ಆ ದೀಪ ಕಣ್ಣಿಂದ ಮರೆಯಾಗಿ ಹೋಗೇಬಿಟ್ಟಿತು. ಮೋಹಿನಿ ವಿಷಾದದ ಧ್ವನಿಯಲ್ಲಿ ಹೇಳಿದಳು... ಹೊರಟುಹೋಯಿತು. ಬಹುಶಃ ಮುಳುಗಿ ಹೋಗಿರಬೇಕು...

ನಾನು ಅವಳನ್ನು ಕರೆಯಬೇಕೆನ್ನುವುದರೊಳಗೆ ಆಕೆ ನಾವು ಯಾವಾಗಲಾದರೊಮ್ಮೆ ನದಿಯಲ್ಲಿ ವಿಹಾರಕ್ಕಾಗಿ ಹೋಗುತ್ತಿದ್ದ ಚಿಕ್ಕ ದೋಣಿಯ ಬಳಿಗೆ ನನ್ನನ್ನು ಎಳೆದುಕೊಂಡು ಹೋಗಿ ಅದರಲ್ಲಿ ಕುಳಿತು ಪ್ರೀತಿಯಿಂದ ತನ್ನ ತೋಳುಗಳಿಂದ ನನ್ನ ಕುತ್ತಿಗೆಯನ್ನು ಬಳಸಿ ಹೇಳಿದಳು. 'ಆ ದೀಪ ಯಾವ ದೇಶಕ್ಕೆ ಹೋಗುತ್ತಿದೆ ಎಂದು ನೋಡಲು ನಾನೂ ಹೋಗುತ್ತೇನೆ.'

ಹೀಗೆ ಹೇಳುತ್ತಲೇ ಮೋಹಿನಿ ಆ ದೋಣಿಯ ಹಗ್ಗವನ್ನು ಬಿಚ್ಚಿಬಿಟ್ಟಳು. ನೀರಿನಲ್ಲಿ ಸಿಲುಕಿದ ಮರದ ರೆಂಬೆ ಯಾವ ರೀತಿ ಅಲೆಗಳ ಹೊಡೆತಕ್ಕೆ ಆಚೆಈಚೆ ಉರುಳಲಾರಂಭಿಸುತ್ತದೋ ಅದೇ ರೀತಿ ದೋಣಿ ಹೊಯ್ದಾಡಲಾರಂಭಿಸಿತು. ನದಿಯ ಆ ಭಯಾನಕ ಹರಿವು, ಅಲೆಗಳ ಹೊಡೆತ, ನೀರಿನ ಮೊರೆತ, ಭಯಹುಟ್ಟಿಸುವ ಅಂಧಕಾರ... ಇವೆರಡರ ನಡುವೆ ಆ ಪುಟ್ಟದೋಣಿ ಹೇಗಾದರೂ ಪಾರಾದೀತು? ನನ್ನ ಎದೆಬಡಿತ ನಿಂತಂತಾಯಿತು. ಆ ನತದೃಷ್ಟ ದೀಪದ ಹಾಗೆ ಈ ದೋಣಿಯೂ ಮುಳುಗಿಬಿಡುವುದೇ? ಆದರೆ ಮೋಹಿನಿಯ ಮನಸ್ಸು ಆ ಕ್ಷಣ ಅವಳ ಹಿಡಿತದಲ್ಲಿರಲಿಲ್ಲ. ಆ ದೀಪದ ಹಾಗೆಯೇ ಅವಳ ಹೃದಯದ ಭಾವನೆಗಳು ಗರ್ಜಿಸುತ್ತಿದ್ದ ಅಲೆಗಳ ನಡುವೆ ನೀರಿನ ಮೊರೆತದ ಸದ್ದಿನಲ್ಲಿ ತೇಲಿಹೋಗುತ್ತಿದ್ದವು. ಸುತ್ತಲೂ ದಟ್ಟೈಸಿದ್ದ ಹುಚ್ಚು ಮೋಡಗಳು ಆವರಿಸಿಕೊಂಡು ನದಿಯ ಆಲಿಂಗನಕ್ಕೆ ಹಾತೊರೆಯುತ್ತಿರುವ ಹಾಗೆ ಬರುತ್ತಿದ್ದವು. ನದಿಯೂ ಕೂಡ ಮೋಡಗಳ ಸ್ಪರ್ಶ ಮಾಡಲೋಸುಗ ಮೇಲಕ್ಕೆ ಚಿಮ್ಮುವ ಹಾಗೆ ಉಕ್ಕೇರುತ್ತಿತ್ತು. ಎತ್ತರವಾದ ನದಿಯ ದಂಡೆ ಅಲ್ಲಲ್ಲಿ ಕುಸಿದು ಬೀಳುವ ಕಪ್ಪುಕಪ್ಪು ಮರಗಳು ಮರ್ಮರಿಸುತ್ತ ಓಲಾಡುವುದನ್ನು ನೋಡುತ್ತ ಮುಂದೆ ಸಾಗುತ್ತಿದ್ದೆವು. ಜನವಸತಿಯ ಪ್ರದೇಶ